ಕಡಬದ ಸಬ್‌ಸ್ಟೇಷನ್ ಕಾಮಗಾರಿ.

63 - ಶ್ರೀ ಎನ್. ಅಂಗಾರ (ಸುಳ್ಯ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನ ಸಭಾಕ್ಷೇತ್ರದ ಕಡಬದಲ್ಲಿ ಕೈಗೊಂಡಿರುವ 33:11 ಕೆ.ವಿ. ಸಬ್‌ಸ್ಟೇಷನ್ ಕಾಮಗಾರಿಯು ಎಂದು ಪ್ರಾರಂಭಿಸಲಾಯಿತು ಹಾಗೂ ಎಂದು ಪೂರ್ಣಗೊಳ್ಳುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) :

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಕಡಬದಲ್ಲಿ ಕೈಗೊಂಡಿರುವ 33:11 ಕೆ.ವಿ. ಸಬಸ್ಟೇಷನ್ ಕಾಮಗಾರಿಯನ್ನು ಡಿಸೆಂಬರ್ 93ರಲ್ಲಿ ಪ್ರಾರಂಭಿಸಲಾಯಿತು. ಈ ಕಾಮಗಾರಿಯನ್ನು ಮಾರ್ಚ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಖಾಸಗಿ ವಲಯವನ್ನು ಪ್ರವಾಸೋದ್ಯಮದಲ್ಲಿ ತೊಡಗಿಸಿ ಕೊಳ್ಳುವಿಕೆ.

64 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96 ಸಾಲಿನಲ್ಲಿ ಪ್ರವಾಸೋದ್ಯಮ ವಲಯದಲ್ಲಿ ಖಾಸಗಿಯವರನ್ನು ತೊಡಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ನಿರೀಕ್ಷಿಸಲಾಗಿರುವ ಒಟ್ಟು ಖಾಸಗಿ ಬಂಡವಾಳ ಹೂಡಿಕೆ.

ಇ) ರಾಜ್ಯದ ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ವಲಯ ಕೈಗೊಳ್ಳಲಾಗುವ ಪ್ರಸ್ತಾಪಿತ ಯೋಜನೆಗಳ ವಿವರ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ರೂ. 250.00 ಕೋಟಿಗಳು.

ಇ) ವಸತಿ, ಸಾರಿಗೆ ವಿನೋದೋದ್ಯಾನ ವನಗಳು, ರೆಸ್ಟಾರ್ಟ್ಸ್, ಗಾಲ್ಫ ಕೋರ್ಸ್, ಜಲಕ್ರೀಡೆ, ರೋಪ್‌ವೇ.

ಬೇಲೂರು ಪಟ್ಟಣಕ್ಕೆ ಹೊಸ ಸೇತುವೆ ನಿರ್ಮಾಣ

65 - ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣ ಪ್ರದೇಶಕ್ಕೆ ಈಗಿರುವ ಸೇತುವೆ ಕಿರಿದಾಗಿದ್ದು ವಾಹನಗಳ ಸಂಖ್ಯೆ ಹೆಚ್ಚಾಗಿದ್ದುದರಿಂದ ಶಿಥಿಲಗೊಂಡಿದ್ದು ವಾಹನಗಳ ಏಕಮುಖವಾಗಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?